ಶ್ರೀಮತಿ ಬಿ. ಎರ್. ಸುಬ್ಬಮ್ಮ.—ನಮ್ಮ ದೇಶದಲ್ಲಿ ಎಷ್ಟು ಸಾವಿರ ಟನ್ ಬೆಳೆಯುತ್ತಿದ್ದಾರೆಂಬುದನ್ನು ಸರ್ಕಾರ ವಿಚಾರ ಮಾಡಿದೆಯೆ ?

ಡಾ॥ ಆರ್. ನಾಗನಗೌಡ.—ಈಗ ಆ ಅಂಕಿಅಂಶ ಕೊಡುವುದಕ್ಕಾಗುವುದಿಲ್ಲ. 1952-53 ರಲ್ಲಿ ಸುಮಾರು 968 ಟನ್ ರಫ್ತು ಮಾಡಿದ್ದೇವೆ.

ಶ್ರೀಮತಿ ಬಿ. ಎರ್. ಸುಬ್ಬಮ್ಮ.—ಏಲಕ್ಕಿ ಬೆಳೆಗಾರರಿಗೆ ಸರಿಯಾಗಿ ವ್ಯಾಪಾರ ಮಾಡಲು ಗೋಡೌನ್ ಸಹಾಯ ಇನ್ನಾಗಿಲ್ಲ, ಅದರಿಂದ ಬಹಳ ಕಷ್ಟವಾಗಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಡಾ॥ ಆರ್. ನಾಗನಗೌಡ.—ಈಗ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಮಾರ್ಕೆಟಿಂಗ್ ಸೊಸೈಟಿಗಳು ಗೋಡೌನ್ ಕಟ್ಟಲು ಏರ್ಪಾಡುಮಾಡಬೇಕೆಂದು ಅವಕಾಶ ಮಾಡಿದೆ. ಸಕಲೇಶಪುರವಲ್ಲೂ ಅದನ್ನು ಮಾಡಲು ಆಲೋಚಿಸ್ತಿದೀವೆ.

ಶ್ರೀಮತಿ ಬಿ. ಎರ್. ಸುಬ್ಬಮ್ಮ.—ಏಲಕ್ಕಿ ವ್ಯಾಪಾರಸ್ಥರು ಕಡಮೆ ದರದಲ್ಲಿ ಏಲಕ್ಕಿಯನ್ನು ತೆಗೆದುಕೊಂಡು ಹೆಚ್ಚಿನ ದರದಲ್ಲಿ ಮಾರುತ್ತಿರುವುದರಿಂದ ರೈತರಿಗೆ ಅನುಕೂಲವಾಗುತ್ತಿಲ್ಲವೆಂಬುದನ್ನು ಪರಿಶೀಲಿಸಿದ್ದೀರಾ ?

ಡಾ॥ ಆರ್. ನಾಗನಗೌಡ.—ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ, ವರದಿ ಸಹ ಬಂದಿದೆ, ಕೋ-ಆಪರೇಟಿವ್ ಸೊಸೈಟಿ ಮುಖಾಂತರ ಮಾರ್ಕೆಟಿಂಗ್ ಸೊಸೈಟಿ ಮುಖಾಂತರ ಉತ್ಪತ್ತಿಗೆ ತಕ್ಕಬೆರೆ ದೊರೆಯುವ ಹಾಗೆ ಮಾಡಬೇಕೆಂದಿದೆ. ಆಗ ಈ ಕಷ್ಟ ನಿವಾರಣೆಯಾಗುತ್ತದೆ.

ಶ್ರೀಮತಿ ಬಿ. ಎರ್. ಸುಬ್ಬಮ್ಮ.—ಏಲಕ್ಕಿ ಬೋರ್ಡನ್ನು ಪ್ರತ್ಯೇಕವಾಗಿ ಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೆ ಕಾಫಿ ಬೋರ್ಡಿನ ಜೊತೆಗಾದರೂ ಸೇರಿಸಿ ಒಂದು ವ್ಯವಸ್ಥೆಮಾಡಲು ಸಾಧ್ಯವಿದೆಯೆ ಎಂಬುದನ್ನು ಪರಿಶೀಲಿಸುವಿರಾ ?

ಡಾ॥ ಆರ್. ನಾಗನಗೌಡ.—ಕೇಂದ್ರ ಸರ್ಕಾರಕ್ಕೆ ಬರೆದು ಪರಿಶೀಲಿಸುತ್ತೇವೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಏಲಕ್ಕಿ ಬೋರ್ಡನ್ನು ಸ್ಥಾಪನೆ ಮಾಡಬೇಕೆಂದು ಕೇಂದ್ರ ಸರ್ಕಾರ ಒಂದು ವರದಿಯನ್ನು ಕೇಳಿದ್ದುದು ಸರ್ಕಾರದ ಅವಗಾಹನೆಗೆ ಬಂದಿದೆಯೆ ?

ಡಾ॥ ಆರ್. ನಾಗನಗೌಡ.—ಏಲಕ್ಕಿ ಬೋರ್ಡನ್ನು ಸ್ಥಾಪನೆ ಮಾಡಬೇಕೆಂದು ನಾವು ನಿಮ್ಮ ಪರವಾಗಿ ಇಂಡಿಯಾ ಸರ್ಕಾರದಲ್ಲಿ ಮನವಿ ಮಾಡಿದ್ದೆವು. ಅದಕ್ಕೆ ಅವರು ಅದರ ಆವಶ್ಯಕತೆಯಿಲ್ಲವೆಂದು ಬರೆದಿದ್ದಾರೆ. ಈಗ ಈ ಸಂಬಂಧವಾಗಿ ನೇಮಕವಾಗಿದ್ದ ಸಮಿತಿಯು ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಆ ಸಮಿತಿಯವರು ಏಲಕ್ಕಿಬೋರ್ಡನ್ನು ಮಾಡಕೂಡದೆಂದು ಸಲಹೆ ಮಾಡಿದ್ದಾರೆಯೆ ?

ಡಾ॥ ಆರ್. ನಾಗನಗೌಡ.—ಇಲ್ಲ, ಸ್ಪೈಸಸ್ ಸಮಿತಿಯವರು ಏಲಕ್ಕಿ ವ್ಯಾಪಾರದ ವಿಷಯದಲ್ಲಿ ಏನು ಚರ್ಚೆ ತೆಗೆದುಕೊಳ್ಳಬೇಕೆಂದು ಸಲಹೆ ಮಾಡಿದ್ದಾರೋ ಅದನ್ನು ಇಂಡಿಯಾ ಸರ್ಕಾರ ಬರೆದಿರುವ ಕಾಗದದಲ್ಲಿ ತಿಳಿಸಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಏಲಕ್ಕಿ ಹೊರದೇಶಕ್ಕೆ ಎಷ್ಟು ಹೋಗುತ್ತಿದೆಯೆಂಬುದನ್ನು ತಿಳಿಸುವುದಕ್ಕಾಗುತ್ತದೆಯೆ ?

ಡಾ॥ ಆರ್. ನಾಗನಗೌಡ.—1952-53 ರಲ್ಲಿ 968 ಟನ್ ರಫ್ತಾಗಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಅಷ್ಟು ದೊಡ್ಡ ಪ್ರಮಾಣದಲ್ಲಿ ಬೆಳೆಯುವವರಿಗಾಗಿ ಒಂದು ಬೋರ್ಡನ್ನು ಸ್ಥಾಪನೆಮಾಡಲು ಏನು ತೊಂದರೆಯಿದೆಯೆಂಬುದನ್ನು ಕೇಂದ್ರ ಸರ್ಕಾರ ತಿಳಿಸಿದೆಯೆ ?

ಡಾ॥ ಆರ್. ನಾಗನಗೌಡ.—ಕೇಂದ್ರ ಸರ್ಕಾರದವರು " from the agricultural aspects, the formation of a Board is not necessary " ಎಂದು ಬರೆದಿದ್ದಾರೆ. ಈ ಬೋರ್ಡನ್ನು ಮಾಡುವ ಕೆಲಸ ನಮ್ಮದಲ್ಲ, ಅದು ಕೇಂದ್ರ ಸರ್ಕಾರಕ್ಕೆ ಸೇರಿದ್ದು, ಹಿಂದೆ ತಮ್ಮ ಅಭಿಪ್ರಾಯವನ್ನು ತಿಳಿಸಿದಾಗ ಕೇಂದ್ರದವರು ಅದಕ್ಕೆ ಒಪ್ಪಲಿಲ್ಲ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಕಾಫಿಯ ಹಾಗೆಯೇ ಏಲಕ್ಕಿಕೂಡ, ಆದ್ದರಿಂದ ಬೋರ್ಡಿನ ಅವಶ್ಯಕತೆಯುದೆಯೆಂದು ಬರೆಯುತ್ತೀರಾ ?

ಡಾ॥ ಆರ್. ನಾಗನಗೌಡ.—ಅದು ಕಾಫಿಯಷ್ಟು ಎಕ್ಸ್‌ಪ್ಯಾನ್ಸಿವ್ ಆಗಿದೆಯೋ ಇಲ್ಲವೋ ಗೊತ್ತಿಲ್ಲ. ಆದರೂ ಕೂಡ ಈಗೇನು ತಾವು ಹೇಳಿದ್ದೀರೋ ಅದನ್ನು ತಿಳಿಸಿ ಒತ್ತಾಯ ಮಾಡುತ್ತೇವೆ.

Mr. SPEAKER.—Question hour is over.

QUESTIONS FOR ANSWERS ON THE DAY

(but not taken up).

Land grant to Landless Agriculturists in Chamarajnagar Taluk.

Q.—46. Sri B. RACHIAH (Yelandur—Scheduled Castes).—

Will the Government be pleased to state :—

(*a*) the total number of landless *bona fide* agriculturists in Chamarajanagar Taluk ;

(*b*) the total number of acres of cultivable land available for being disposed of under Darkhast ;

(*c*) the number of acres of land already disposed of ;

(*d*) the total extent of land requested to be released by the Forest Department ?

A.—Sri A. G. RAMACHANDRA RAO (Minister for Law and Education).—

(*a*) About 37,955 persons.
(*b*) About 6,768 acres 34 guntas.
(*c*) About 714 acres 8 guntas.
(*d*) About 5,000 acres.